Completing of Water Works sanctioned for Magadi Town.

*Q.—584. Sri C. R. RANGE GOWDA (Magadi).—

Will the Government be pleased to state :—

(*a*) when the water works for Magadi town was sanctioned ;
(*b*) what are the impediments to complete the works ?

A.—(*a*) Sri K. PUTTASWAMY (Minister for Municipal Administration).—

(*a*) In March 1962.
(*b*) Nil.

ಶ್ರೀ ಟಿ. ಮಾದಯ್ಯಗೌಡ.—ಮಾಗಡಿ ಟೌನಿಗೆ ನೀರನ್ನೊದಗಿಸಲು ಎಷ್ಟು ಹಣ ಮಂಜೂರಾಗಿದೆ ? ಅದರಲ್ಲಿ ಎಷ್ಟು ಖರ್ಚಾಗಿದೆ ?

ಶ್ರೀ ಕೆ. ಪುಟ್ಟಸ್ವಾಮಿ.—ಇದುವರೆಗೆ 2,22,363 ರೂಪಾಯಿ ಖರ್ಚಾಗಿದೆ, ಈ ವರ್ಷ 50 ಸಾವಿರ ರೂಪಾಯಿಗಳನ್ನು ಒದಗಿಸಲಾಗಿದೆ.

ಶ್ರೀ ಟಿ. ಮಾದಯ್ಯಗೌಡ.—ಇನ್ನೂ ಎಷ್ಟು ಹಣ ಖರ್ಚುಮಾಡಿ ಈ ಕೆಲಸ ಪೂರೈಸಬೇಕಾಗಿದೆ ?

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಲ್ಪ ಹಣ ಬೇಕು ಎಂದು ಕಾಣುತ್ತದೆ, ಇನ್ನೂ ರಿವೈಜ್ಡ್ ಅಂದಾಜು ಬಂದಿಲ್ಲದಿರುವುದರಿಂದ ಇಷ್ಟೇ ಬೇಕೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಟಿ. ಮಾದಯ್ಯಗೌಡ.—ಈ ಕೆಲಸವನ್ನು ಪೂರ್ಣಮಾಡಲು ಅಡ್ಡಿ ಆತಂಕಗಳೇನೂ ಇಲ್ಲವೆಂದು ಉತ್ತರ ಕೊಡಲಾಗಿದೆ. ಆದರೂ ಸಹ 62ನೆಯ ಇಸವಿಯಿಂದ ಪ್ರಾರಂಭವಾಗಿರುವ ಕೆಲಸ ಇನ್ನೂ ಪೂರ್ಣವಾಗಿಲ್ಲ. ಅಡ್ಡಿ ಆತಂಕವಿಲ್ಲದಿರುವಾಗ ಜಾಗ್ರತೆ ಮಾಡಲು ಏಕೆ ವ್ಯವಸ್ಥೆ ಮಾಡಿಲ್ಲ ?

ಶ್ರೀ ಕೆ. ಪುಟ್ಟಸ್ವಾಮಿ.—ಅಡ್ಡಿ ಆತಂಕವಿಲ್ಲದೆ ಕೆಲಸ ನಮರ್ಪಕವಾಗಿ ನಡೆಯುತ್ತಿದೆ. ಅದಷ್ಟು ಜಾಗ್ರತೆ ಮುಗಿಸುತ್ತೇವೆ.

ಶ್ರೀ ಟಿ. ಮಾದಯ್ಯಗೌಡ.—ಈಗ ಎಷ್ಟು ಕೆಲಸವಾಗಿದೆ ? ಇನ್ನೂ ಯಾವ ಯಾವ ಕೆಲಸವಾಗಬೇಕಾಗಿದೆ ?

ಶ್ರೀ ಕೆ. ಪುಟ್ಟಸ್ವಾಮಿ.—ಆ ತಪಶೀಲು ನನ್ನಲ್ಲಿಲ್ಲ.

Formation of a Road from Kanthapura to Gulihatte, Duggapura.

*Q.—645. Sri G. T. RANGAPPA (Hosadurga).—

Will the Government be pleased to state :—

(*a*) whether they have received any representations regarding the necessity of forming a road from Kanthapura Village, Hosadurga Taluk, to Gulihatte, Duggapura ;

(*b*) whether it has come to their notice that the people of five to six villages are put to hardship for want of such a road ;

(*c*) the steps taken by them in this regard ?

A.—G. B. SHANKARA RAO (Parliamentary Secretary to the Minister for Public Works).—

(*a*) No.
(*b*) and (*c*) Do not arise in view of reply to clause (*a*) above.

ಶ್ರೀ ಜಿ. ಟಿ. ರಂಗಪ್ಪ.—ಈ ರಸ್ತೆಯಿಲ್ಲದೆ 5-6 ಗ್ರಾಮಗಳಿಗೆ ತೊಂದರೆಯಾಗಿರುವುದರಿಂದ ಈಗಲಾದರೂ ಕೂಡ ರಸ್ತೆ ಮಾಡಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಜಿ. ಬಿ. ಶಂಕರರಾವ್.—ಮಾನ್ಯ ಸದಸ್ಯರು ಹೇಳುವ ರಸ್ತೆಯ ಉದ್ದವೆಷ್ಟು, ಅದಕ್ಕೆ ಖರ್ಚು ಎಷ್ಟಾಗುತ್ತದೆ ಎಂಬುದನ್ನೆಲ್ಲಾ ನೋಡಿಕೊಂಡು ಆಲೋಚನೆ ಮಾಡಬೇಕಾಗುತ್ತದೆ.

ಶ್ರೀ ಬಿ. ಎಲ್. ಗೌಡ.—ಚಿತ್ರದುರ್ಗ ಜಿಲ್ಲೆಯಲ್ಲಿ ನೂರು ಡದುರ ಮೈಲಿಗೆ ಎಷ್ಟು ಮೈಲಿ ರಸ್ತೆ ಇದೆ ಮತ್ತು ರಾಜ್ಯದಲ್ಲಿ ಎಷ್ಟು ಮೈಲಿ ರಸ್ತೆ ಇದೆ ? ಇವೆರಡಕ್ಕೂ ಇರುವ ವ್ಯತ್ಯಾಸವೇನು ?

Sri G. B. SHANKARA RAO.—If a separate question is put, I will be able to answer.

Mr. DEPUTY SPEAKER.—How can he have all the details with regard to a particular road ?

Mr. DEPUTY SPEAKER.—Next Question 667. Hon'ble Member is not present. Next question-691.

Construction of a Bridge across the Krishna river.

*Q.—691. Sri S. M. GURADDI (Muddebihal).—

Will the Government be pleased to state :—

(*a*) whether it is a fact that the Highway No. 13 is running *via* Bijapur, Bagewadi and Muddebihal ;

(*b*) the village along the abovesaid road near which they propose to construct a bridge across the Krishna river ?

*A.—Sri G. B. SHANKARA RAO (Parliamentary Secretary to the Minister for Public Works).—

(*a*) Yes.

(*b*) The bridge site has not yet been finally fixed.

ಶ್ರೀ ಎಸ್. ಎಂ. ಗುರೆಡ್ಡಿ.—13ನೆ ಹೆದ್ದಾರಿ ಅಂತಿಮವಾಗಿ ಯಾವಯಾವ ಊರುಗಳ ಮೇಲೆ ಹಾದು ಹೋಗುತ್ತದೆ ?

Sri G. B. SHANKARA RAO.—The alignment as tentatively approved by the Government of India is *via* Bijapur, Bagewadi, Muddebihal and another place. But this alignment shall have to be changed on account of the location of the bridge across the Krishna.

ಶ್ರೀ ಎಸ್. ಎಂ. ಗುರೆಡ್ಡಿ.—ಅಂತಿಮವಾಗಿ ಕೇಂದ್ರ ಸರ್ಕಾರದವರು ಎಲ್ಲಿಂದ ಯಾವ ಊರಿನ ಮೇಲೆ ಈ ರಸ್ತೆಯನ್ನು ಹಾಯಿಸಬೇಕೆಂದು ತಿಳಿಸಿದ್ದಾರೆ, ಆ ಪ್ರಕಾರ ಎಸ್ಟಿಮೇಟ್ ಇವೆಲ್ಲ ಮಾಡಿ ಕೇಂದ್ರ ಸರ್ಕಾರಕ್ಕೆ ಕಳಿಸಲಾಗಿದೆಯೇ ಹೇಗೆ ?

ಶ್ರೀ ಜಿ. ಬಿ. ಶಂಕರರಾವ್.—ಇನ್ನೂ ಅಂತಿಮವಾಗಿ ನಿರ್ಧಾರವಾಗಿಲ್ಲ. ಕೃಷ್ಣಾನದಿಗೆ ಸೇತುವೆಯನ್ನು ಎಲ್ಲಿ ಕಟ್ಟಬೇಕು ಎನ್ನುವುದು ನಿರ್ಧರವಾದ ಮೇಲೆ ಅಂತಿಮವಾಗಿ ಅಲೈನಮೆಂಟ್ ಗೊತ್ತಾಗುತ್ತದೆ.

ಶ್ರೀ ಎಸ್. ಎಂ. ಗುರೆಡ್ಡಿ.—ಸೇತುವೆ ಅಂತಿಮವಾಗಿ ಆಗುವವರೆಗೆ ರಸ್ತೆಯ ಅಲೈನ್‌ಮೆಂಟ್ ಮಾಡುವುದಿಲ್ಲವೇ ಅಥವಾ ರಸ್ತೆಯನ್ನು ಹಾಕಿದ ನಂತರ ಸೇತುವೆಯ ಸಲುವಾಗಿ ಅಂದಾಜು ಮಾಡ ರಾಗುವುದೇ ಸ್ವಾಮಿ ?